# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ನಿಯಂತ್ರಣಕ್ಕೊಳಪಟ್ಟಿದೆ)

ಸಂ:ಬೆವಿಕಂ/ಪ್ರ.ವ್ಯ(ಮಾ&ವಾ)/ಉ.ಪ್ರ.ವ್ಯ(ಮಾ&ವಾ)/ಸ.ಪ್ರ.ವ್ಯ(ಮಾ-2)/2020-21 - C4S-16
ಲಗತ್ತು:
ಇ-ಮೇಲ್: gmmcom123@gmail.com

ನಿಗಮ ಕಛೇರಿ, ಬೆವಿಕಂ,
ಕೆ.ಆರ್.ವೃತ್ತ, ಬೆಂಗಳೂರು -01

ದಿನಾಂಕ: 17-7-2020

**ವಿಷಯ:** COVID-19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ, ಬೆವಿಕಂನಲ್ಲಿ ಪೂರ್ವ ಪಾವತಿ ಮಾಪಕಗಳನ್ನು ಅಳವಡಿಸಿದ ತಾತ್ಕಾಲಿಕ ಸ್ಥಾವರಗಳ ನವೀಕರಣ ಅವಧಿಯನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:** ವಿಸ್ತೃತ ಕಾರ್ಯಾದೇಶ ಸಂಖ್ಯೆ: ಬೆವಿಕಂ/ ಪ್ರ.ವ್ಯ(ಮಾ & ವಾ)/ ವಿ.ಕಾ./ 028/17-18 ದಿನಾಂಕ 25.07.2017.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆವಿಕಂನಲ್ಲಿ 18 ಕಿ.ವ್ಯಾ ಕ್ಕಿಂತ ಕಡಿಮೆ ಹೊರೆಯ ತಾತ್ಕಾಲಿಕ ಸ್ಥಾವರಗಳಿಗೆ ಪೂರ್ವಪಾವತಿ ಮಾಪಕಗಳನ್ನು ಅಳವಡಿಸಲಾಗಿದೆ. ಸದ್ಯದ ವ್ಯವಸ್ಥೆಯಲ್ಲಿ ಪೂರ್ವಪಾವತಿ ಮಾಪಕಗಳನ್ನು ಅಳವಡಿಸಿದ ತಾತ್ಕಾಲಿಕ ಸ್ಥಾವರಗಳ ನವೀಕರಣದ ಸಂದರ್ಭದಲ್ಲಿ ಗ್ರಾಹಕರು ಪ್ರೀಪೇಯ್ಡ್ ವೆಂಡಿಂಗ್ ಸ್ಟೇಷನ್‌ಗೆ ಬಂದು ನವೀಕರಣ ಮಾಡಿಸಬೇಕಿರುತ್ತದೆ.

ಮುಂದುವರೆದಂತೆ, ಸದ್ಯದ ಪರಿಸ್ಥಿಯಲ್ಲಿ ಕೋವಿಡ-19 ವೈರಾಣುಗಳಿಂದ ಹರಡುವ ಅಪಾಯಕಾರಿ ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಾರ್ವಜನಿಕ ಸ್ಥಳಗಳಲ್ಲಿ ಜನದಟ್ಟಣೆಯನ್ನು ನಿಷೇಧಿಸುವ ಮುಂಜಾಗ್ರತಾ ಕ್ರಮವನ್ನು ಕೈಗೊಂಡಿದೆ. ಕರ್ನಾಟಕ ಸರ್ಕಾರದ ಆದೇಶದಂತೆ ಸದರಿ ನಿಷೇಧವು 15.07.2020 ರಿಂದ 21.07.2020 ರ ವರೆಗೆ ಜಾರಿಯಲ್ಲಿರುತ್ತದೆ. ಈ ಹಿನ್ನಲೆಯಲ್ಲಿ ಬೆವಿಕಂನ, ಪಾರ್ವಪಾವತಿ ಮಾಪಕ ಅಳವಡಿಸಿದ ತಾತ್ಕಾಲಿಕ ಸ್ಥಾವರಗಳ ಗ್ರಾಹಕರು ಬೆವಿಕಂ ಕಛೇರಿ/ ಪ್ರೀಪೇಯ್ಡ್ ವೆಂಡಿಂಗ್ ಸ್ಟೇಷನ್‌ಗೆ ಬಂದು ನವೀಕರಣ ಮಾಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

## ಅಧಿಕೃತ ಜ್ಞಾಪನ

ಬೆವಿಕಂನ ಪೂರ್ವ ಪಾವತಿ ಮಾಪಕಗಳನ್ನು ಅನುಷ್ಠಾನಗೊಳಿಸಲು ಮೆ॥ ಎನ್‌ಶೂರ್ ರಿಲೈಬಲ್ ಪವರ್ ಸೊಲ್ಯೂಷನ್ಸ್ ಪ್ರೈ.ಲಿ., ಸಂಸ್ಥೆಯವರಿಗೆ ವಿಸ್ತೃತ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಸದರಿ ಸಂಸ್ಥೆಯು 15.07.2020 ರಿಂದ 21.07.2020 ರ ಅವಧಿಯಲ್ಲಿ ನವೀಕರಣಗೊಳ್ಳಬೇಕಾದ ಎಲ್ಲಾ ಸ್ಥಾವರಗಳ ನವೀಕರಣ ಅವಧಿಯನ್ನು 28 ದಿನಗಳವರೆಗೆ ತಂತ್ರಾಂಶದಲ್ಲಿ (Back end) ವಿಸ್ತರಿಸುವುದು. ಇದಕ್ಕಾಗಿ ಪ್ರತಿ ಗ್ರಾಹಕರ ಸ್ಥಾವರಗಳಿಗೆ ರೂ 1 ರಂತೆ ಶುಲ್ಕವನ್ನು ಗ್ರಾಹಕರ ಖಾತೆಗೆ ಡೆಬಿಟ್ ಮಾಡುವುದು (ತಂತ್ರಾಶದ ಅವಶ್ಯಕತೆ) ಹಾಗೂ ಸದರಿ ಸಂಸ್ಥೆಯವರು ನವೀಕರಣ ಅವಧಿಯನ್ನು ವಿಸ್ತರಿಸಿದ ಎಲ್ಲಾ ಸ್ಥಾವರಗಳ ಗ್ರಾಹಕರಿಗೆ SMS ಮುಖಾಂತರ ಟೋಕನ್ ಸಂಖ್ಯೆಯನ್ನು ನೀಡುವುದು.

ಈ ತರಹ ನವೀಕರಣ ಅವಧಿಯನ್ನು ವಿಸ್ತರಿಸಿದ ತಾತ್ಕಾಲಿಕ ಸ್ಥಾವರಗಳ ಗ್ರಾಹಕರು ತಮಗೆ SMS ಮುಖಾಂತರ ಬಂದಿರುವ ಟೋಕನ್ ಸಂಖ್ಯೆಯನ್ನು ಪೂರ್ವಪಾವತಿ ಮಾಪಕದಲ್ಲಿ ನಮೂದಿಸಿ ತಮ್ಮ ಸ್ಥಾವರದ ನವೀಕರಣ ಅವಧಿಯನ್ನು ಮುಂದಿನ 28 ದಿನಗಳವರೆಗೆ ವಿಸ್ತರಿಸಬಹುದಾಗಿರುತ್ತದೆ. ಗ್ರಾಹಕರು ಇಚ್ಚೆಪಟ್ಟಲ್ಲಿ, ಬೆಸ್ಕಾಂ ಮಿತ್ರ ಮೊಬೈಲ್ ಆ್ಯಪ್ ಮುಖಾಂತರ ಕರೆನ್ಸಿ ಮೊತ್ತವನ್ನು ರೀಚಾರ್ಜ ಮಾಡಿಸಿಕೊಳ್ಳಬಹುದಾಗಿರುತ್ತದೆ.

ಬೆವಿಕಂನ ಎಲ್ಲಾ ಕಾರ್ಯ ಮತ್ತು ಪಾಲನಾ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಮತ್ತು ಇತರೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಮೆ॥ ಎನ್‌ಶೂರ್ ರಿಲೈಬಲ್ ಪವರ್ ಸೊಲ್ಯೂಷನ್ಸ್ ಪ್ರೈ.ಲಿ., ಸಂಸ್ಥೆಯ ಪ್ರತಿನಿಧಿಯೊಂದಿಗೆ ಸಂಪರ್ಕದಲ್ಲಿದ್ದು ಬೆವಿಕಂನ ಗ್ರಾಹಕರಿಗೆ ಅನಾನುಕೂಲವಾಗದಂತೆ ನೋಡಿಕೊಳ್ಳುವುದು.

ಮೆ॥ ಎನ್‌ಶೂರ್ ರಿಲೈಬಲ್ ಪವರ್ ಸೊಲ್ಯೂಷನ್ಸ್ ಪ್ರೈ.ಲಿ., ಸಂಸ್ಥೆಯವರು ಪ್ರತಿದಿನ ನವೀಕರಿಸಲ್ಪಟ್ಟ ಸ್ಥಾವರಗಳ ಮಾಹಿತಿಯನ್ನು ಸಂಬಂದಿಸಿದ ಉಪವಿಭಾಗಗಳಿಗೆ ಸಲ್ಲಿಸುವುದು. ಈ ರೀತಿ ನವೀಕರಿಸಲ್ಪಟ್ಟ ಸ್ಥಾವರಗಳ ಮಾಹಿತಿಯನ್ನು ಉಪವಿಭಾಗಾಧಿಕಾರಿಗಳು ತಪ್ಪದೆ ಬಿಲ್ಲಿಂಗ್ ತಂತ್ರಾಂಶದಲ್ಲಿ (CC&B/TRM) ನಮೂದಿಸಿ, ವಿಸ್ತರಣೆಗೆ ಸೂಕ್ತ ಕ್ರಮಗಳನ್ನು ಪಾಲಿಸುವುದು.

15.07.2020 ರಿಂದ 21.07.2020 ರ ಅವಧಿಯಲ್ಲಿ ನವೀಕರಣಗೊಳ್ಳಬೇಕಾದ ಎಲ್ಲಾ ಸ್ಥಾವರಗಳ ನವೀಕರಣ ಅವಧಿಯನ್ನು 28 ದಿನಗಳವರೆಗೆ ವಿಸ್ತರಿಸಲಾಗುವುದು. ಒಂದುವೇಳೆ ಗ್ರಾಹಕರು 28 ದಿನಗಳ ಅವಧಿಗಿಂತ ಮುಂಚಿತವಾಗಿಯೇ ತಾತ್ಕಾಲಿಕ ಸಂಪರ್ಕವನ್ನು ಕಡಿತಗೊಳಿಸಲು ಇಚ್ಛೆಸಿದಲ್ಲಿ, ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳಿಗೆ ದೂರವಾಣಿ ಮುಖಾಂತರ ಸಂಪರ್ಕಿಸಿ ಮುಂದಿನ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

ಬೆವಿಕಂನ ಪೂರ್ವ ಪಾವತಿ ಸ್ಥಾವರಗಳ ಗ್ರಾಹಕರು/ ಬೆವಿಕಂ ಅಧಿಕಾರಿ ಅಥವಾ ಸಿಬ್ಬಂದಿವರ್ಗದವರು, ಯಾವುದೇ ಸ್ಪಷ್ಟೀಕರಣಕ್ಕಾಗಿ ಮೆ॥ ಎನ್‌ಶೂರ್ ರಿಲೈಬಲ್ ಪವರ್ ಸೊಲ್ಯೂಷನ್ಸ್ ಪ್ರೈ.ಲಿ., ಸಂಸ್ಥೆಯ ಈ ಕೆಳಕಂಡ ಸಹಾಯವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದು.

1. 9008244336
2. 9008299336
3. 9742870350

ಈ ಆದೇಶವು 15.07.2020 ರಿಂದ 21.07.2020 ರ ಅವಧಿಯಲ್ಲಿ ನವೀಕರಣಗೊಳ್ಳಬೇಕಾದ **ಬಿಬಿಎಂಪಿ ಪ್ರದೇಶ, ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಒಳಗೊಂಡಿರುವ ಬೆಂಗಳೂರು ಪ್ರದೇಶದಲ್ಲಿರುವ ಪೂರ್ವಪಾವತಿ ಮಾಪಕಗಳನ್ನು ಅಳವಡಿಸಿದ ತಾತ್ಕಾಲಿಕ ಸ್ಥಾವರಗಳಿಗೆ ಮಾತ್ರ ಅನ್ವಯಿಸುತ್ತದೆ.**

*ನಿರ್ದೇಶಕರು(ತಾಂತ್ರಿಕ)ರವರಿಂದ ಅನುಮೋದಿಸಲ್ಪಟ್ಟಿದೆ.*

**(ರಮೇಶ. ಹೆಚ್.ಜೆ)**
**ಪ್ರಧಾನ ವ್ಯವಸ್ಥಾಪಕರು (ವಿ)**
**ಮಾಪಕ ಮತ್ತು ವಾಣಿಜ್ಯ ಶಾಖೆ**

**ಪ್ರತಿಗಳು:**

1. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು, ಬೆವಿಕಂ., ನಿಗಮ ಕಛೇರಿ. ಕೆ.ಆರ್. ವೃತ್ತ, ಬೆಂಗಳೂರು.
2. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಬೆಂಮಕ್ಷೇವ(ಉತ್ತರ)/(ದಕ್ಷಿಣ)/ಬೆಂಗ್ರಾಕ್ಷೇವ ವಲಯ
3. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ), ಕಾ ಮತ್ತು ಪಾ ವೃತ್ತಗಳು, ಬೆವಿಕಂ.
4. ಪ್ರಧಾನ ವ್ಯವಸ್ಥಾಪಕರು (ICT & MIS) ಬೆವಿಕಂ., ನಿಗಮ ಕಛೇರಿ. ಕೆ.ಆರ್. ವೃತ್ತ, ಬೆಂಗಳೂರು ಇವರಿಗೆ ಬೆವಿಕಂ ಜಾಲತಾಣದಲ್ಲಿ ಪ್ರಕಟಿಸಲು ಕೋರಿ.
5. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ಬೆವಿಕಂ., ನಿಗಮ ಕಛೇರಿ. ಕೆ.ಆರ್. ವೃತ್ತ, ಬೆಂಗಳೂರು.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ), ಕಾ ಮತ್ತು ಪಾ ವಿಭಾಗಗಳು, ಬೆಂಮಕ್ಷೇವ(ಉತ್ತರ)/(ದಕ್ಷಿಣ)/ಬೆಂಗ್ರಾಕ್ಷೇವ ಬೆವಿಕಂ.
7. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ), ಕಾ ಮತ್ತು ಪಾ ಉಪವಿಭಾಗಗಳು, ಬೆಂಮಕ್ಷೇವ(ಉತ್ತರ)/(ದಕ್ಷಿಣ)/ಬೆಂಗ್ರಾಕ್ಷೇವ ಬೆವಿಕಂ. ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ.
8. ವ್ಯ.ನಿ/ನಿ(ತಾಂ)/ನಿ(ಹ)ರವರ ಆಪ್ತ ಸಹಾಯಕರು, ಇವರಿಗೆ ವ್ಯ.ನಿ/ನಿ(ತಾಂ)/ ನಿ(ಹ)ರವರ ಗಮನಕ್ಕೆ ತರಲು ಕೋರಿ.
9. ಮೆ॥ ಎನ್‌ಶೂರ್ ರಿಲೆಯಬಲ್ ಪವರ್ ಸಲ್ಯೂಷನ್ಸ್ ಲಿಮಿಟೆಡ್, #606, ಜೆ ಟವರ್ಸ್, ಬಿನ್ನಿಸ್ವನ್ ಗಾರ್ಡನ್, ಕೆ.ಪಿ. ಅಗ್ರಹಾರ, ಮಾಗಡಿ ಮೇನ್ ರೋಡ್, ಬೆಂಗಳೂರು–23 ಇವರಿಗೆ ಅಗತ್ಯ ಕ್ರಮಕ್ಕಾಗಿ.